ಶ್ರೀ ಎಸ್.ಎಂ. ಆಡ್ಯಂತಾಯ.— ಮಾನ್ಯ ದೇವೇಗೌಡರು ಇಲ್ಲಿಯೇ ಇದ್ದಾರೆ ಅವರಿಂದ ವಶಕ್ಕೆ ತೆಗೆದುಕೊಳ್ಳಿ.

ಶ್ರೀ ಡಿ. ಮಂಜುನಾಥ್.— ಲೋಕೋಪಯೋಗಿ ಇಲಾಖಾ ಅಧಿಕಾರಿಗಳನ್ನು ನೋಡಿ; ಕಟ್ಟಡ ತೆಗೆದುಕೊಳ್ಳಬೇಕೆಂದು ಬೆಳಿಗ್ಗೆ ಆದೇಶ ಕೊಟ್ಟಿದ್ದೇನೆ.

ಬಿಜಾಪುರ ಜಿಲ್ಲೆಯ ಮೂಂಗಂನೂರು ಮತ್ತು ಇಂಗಳಗಿ ಯಾತ ನೀರಾವರಿ ಯೋಜನೆಗಳ ಬಗ್ಗೆ.

೧೪೦೧. ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳೇದ ಗುಡ್ಡ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಮೂಂಗನೂರು ಮತ್ತು ಇಂಗಳಗಿ ಯಾತ ನೀರಾವರಿ ಯೋಜನೆಯಿಂದ ಎಷ್ಟು ಎಕರೆ ನೀರಾವರಿ ಆಗುವುದು ?

ಆ) ಯೋಜನೆಯು ಪೂರ್ಣಗೊಂಡಿದೆಯೇ, ಹಾಗಿದ್ದಲ್ಲಿ ಈ ವರ್ಷ ನೀರಾವರಿಗೆ ನೀರನ್ನು ಬಿಡಲಾಗುವುದೇ ?

ಇ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮೂಂಗನೂರು ಏತ ನೀರಾವರಿ ಯೋಜನೆ ... ೧೩೩೬ ಎಕರೆಗಳು

ಇಂಗಳಗಿ ಏತ ನೀರಾವರಿ ಯೋಜನೆ ... ೭೦೦ ಎಕರೆಗಳು

ಆ) ಮತ್ತು ಇ) ಎರಡೂ ಯೋಜನೆಗಳು ಪೂರ್ಣಗೊಂಡಿವೆ. ಆದರೆ ಪರಿಕ್ಷಾರ್ಥವಾಗಿ ನೀರನ್ನು ಬಿಟ್ಟಾಗ ರೈಸಿಂಗ್ ಮೈಯಿನ್‌ನ ಕೆಲವು ಕೊಳವೆಗಳು ಮತ್ತು ಜಾಯಿಂಟ್‌ಗಳು ಒಡೆದು ಹೋದುದರಿಂದ, ದುರಸ್ತಿ ಕಾರ್ಯಪನ್ನು ಕೈಗೊಳ್ಳಲಾಗಿದ್ದು, ದುರಸ್ತಿ ಕಾರ್ಯವು ಪ್ರಗತಿಯಲ್ಲಿದೆ. ಸಣ ನೀರಾವರಿ, ಮುಖ್ಯ ಇಂಜಿನಿಯರ್ ಅವರನ್ನು ಸ್ಥಳ ಪರೀಕ್ಷೆ ಮಾಡಿ, ಅವಶ್ಯಕ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕೋರಲಾಗಿದೆ. ಅವರ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

ಶ್ರೀ ಎಸ್. ಜಿ. ನಂಜಯ್ಯನ ಮಠ್.—ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಈ ಯೋಜನೆಗಳು ೧೯೮೩-೮೪ರಲ್ಲಿ ಪೂರ್ತಿಯಾಗಿವೆ. ಕೇಬಲ್ ಜಗಳದಲ್ಲಿ ಕಂಟ್ರಾಕ್ಟರ್ ಮತ್ತು ಲೋಕೋಪಯೋಗಿ ಇಂಜಿನಿಯರ್‌ಗಳ ನಡುವೆ ವ್ಯಾಜ್ಯ ಪ್ರಾರಂಭವಾಗಿ ಎರಡು ವರ್ಷಗಳು ಮುಗಿಯಿತು. ಕಂಟ್ರಾಕ್ಟ್‌ದಾರರು ಕಳಪೆಯಾದ ಪೈಪುಗಳನ್ನು ಜೋಡಿಸಿದ್ದರಿಂದ, ಪ್ರಾರಂಭ ಮಾಡಿದ ವರ್ಷವೇ ಎಲ್ಲಾ ಪೈಪುಗಳು ಕಿತ್ತುಕೊಂಡು ಹೋಗಿವೆ. ಈ ವಿಚಾರದಲ್ಲಿ ಕಂಟ್ರಾಕ್ಟ್‌ದಾರರು ಬಾಂಡ್ ಕೂಡ ಬರೆದುಕೊಟ್ಟಿದ್ದಾರೆ. ೪೫ ದಿವಸದೊಳಗೆ ತೊಂದರೆಯಾದರೆ, ದುರಸ್ತಿ ಮಾಡಿಕೊಡುವುದಾಗಿ ತಿಳಿಸಿದ್ದರೂ ಇವತ್ತು ೧೪೫ ದಿವಸ ಕಳೆದರೂ ಪೈಪುಗಳನ್ನು ಇನ್ನು ಜೋಡಿಸಿಲ್ಲ. ಈ ವಿಚಾರದಲ್ಲಿ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುವಂತೆಯೂ ಕೆಲಸವನ್ನು ಸ್ಪೀಡಪ್ ಆಗಿ ಮಾಡುವಂತೆ ಆದೇಶ ಕೊಡುತ್ತೀರಾ? ೨೦೦೦ ಎಕರೆಗೆ ನೀರು ಉಣಿಸುವ ಈ ಯೋಜನೆಯಿಂದ ರೈತರಿಗೆ ತೊಂದರೆಯಾಗುವುದನ್ನು ತಪ್ಪಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಸತ್ಯಾಂಶ ಇದೆ. ೧೯೮೫ನೇ ಇಸವಿ, ೯ನೇ ತಿಂಗಳು, ೩ನೇ ತಾರೀಖು ಈ ಸದನದಲ್ಲಿಯೇ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಅದರ ಹಿಸ್ಟರಿಯನ್ನೆಲ್ಲಾ ನಾನು ತಮಗೇ ಹೇಳಿದ್ದೇನೆ. ಯಾರೋ ಮಾಡಿದ ತಪ್ಪಿಗೆ ನಾನು ಉತ್ತರ ಕೊಡಬೇಕು. ಇದು ಹಿಂದೆ ನಡೆದಿರುವ ಕೆಲಸ. ಅದನ್ನು ನಾವು ಸರಿಪಡಿಸಬೇಕಾಗಿದೆ. ಇದರ ಕಾಸ್ಟ್‌ನ್ನು ಯಾರಿಂದ ರಿಕವರಿ ಮಾಡಬೇಕು ? ಏನು ಮಾಡಬೇಕು ಎನ್ನುವ ಬಗ್ಗೆ ಕಾಳೂನು ಇದೆ. ಕೆಲಸ ಮಾಡಿದವರು ಮನೆಗೆ ಹೋಗಿರುತ್ತಾರೆ. ಪಿಎಸಿ ಫೈನಾನ್ಸ್ ಡಿಪಾರ್ಟ್

ಮೆಂಟ್, ಇದೆಲ್ಲಾ ಕಾನೂನಿನ ಹಿಂಸೆ. ಅದನ್ನು ನಾವು ಸರಿ ಮಾಡಿದ್ದೆವು. ಪುನಃ ನೀರನ್ನು ಬಿಟ್ಟಾಗ ಪೈಪಿನಿಂದ ನೀರು ಬರ್ಸ್ಟ್ ಆಗಿದೆ. ವಿಜಯಾ ಪೈಪ್ ವರ್ಕ್ಸ್‌ನವರು ಸಬ್‌ಸ್ಟ್ಯಾಂಡರ್ಡ್ ವರ್ಕ್ ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮೈಸೂರಿನ ಆಸ್ಪತ್ರೆಯ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಿ ನಾನೇ ಹಲ್ಲು ಮುರಿಸಿಕೊಂಡೆ. ಆ ರೀತಿ ಇದೆ ಈ ದೇಶದ ಕಾನೂನು. ಇಷ್ಟು ಮಾತ್ರ ನಾನು ಹೇಳುತ್ತೇನೆ. ಇವೊತ್ತು ರೈತರಿಗೆ ಅನ್ಯಾಯ ಆಗಬಾರದು. ಯಾರೋ ಮಾಡಿದ ತಪ್ಪಿಗೆ ಅದನ್ನು ರೀಪ್ಲೇಸ್ ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದೇನೆ. ಯಾರು ಯಾರು ತಪ್ಪು ಮಾಡಿದ್ದಾರೆ ಎನ್ನುವ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರತ್ಯೇಕ ಕಡತ ಸೃಷ್ಟಿ ಮಾಡಿ ಕಳುಹಿಸಿ ಎಂದು ಹೇಳಿದ್ದೇನೆ. ಇರತಕ್ಕ ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ಬೇಗ ಕ್ರಮ ತೆಗೆದುಕೊಳ್ಳಲಾಗುತ್ತದೆಯೋ ಅಷ್ಟು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮೈಸೂರು ಜಿಲ್ಲೆಯಲ್ಲಿ ಇಂಗ್ಲೀಷ್ ಮಾಧ್ಯಮದ ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡಲು ಖಾಸಗೀಯವರಿಗೆ ಅನುಮತಿ

೧೩೦೪. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆಯಲ್ಲಿ ೧೯೮೬-೮೭ನೇ ಸಾಲಿನಲ್ಲಿ ಖಾಸಗಿಯವರಿಗಾಗಲೀ ಅಥವಾ ಖಾಸಗಿ ವಿದ್ಯಾ ಸಂಸ್ಥೆಗಳಿಗಾಗಲೀ ಇಂಗ್ಲೀಷ್ ಮಾಧ್ಯಮದ ಪ್ರೌಢಶಾಲೆ ಪ್ರಾರಂಭ ಮಾಡಲು ಅನುಮತಿ ನೀಡಲಾಗಿದೆಯೆ ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಯಾವ ನೀತಿಯನ್ನು ಅನುಸರಿಸಲಾಗಿದೆ ?

ಇ) ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರೌಢ ಶಾಲೆಗಳನ್ನು (ಇಂಗ್ಲೀಷ್ ಮಾಧ್ಯಮ) ತೆರೆಯಲು ಅನುಮತಿ ಕೋರಿ ಯಾವ ಯಾವ ಅರ್ಜಿಗಳು ಇನ್ನೂ ವಿಲೇವಾರಿ ಆಗದೆ ಉಳಿದಿವೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಅನುಮತಿ ನೀಡಲಾಗಿದೆ.

ಆ) ಅವಶ್ಯಕತಾನುಸಾರ ಮತ್ತು ನಿಯಮಾನುಸಾರ ಅನುಮತಿ ನೀಡಲಾಗಿದೆ.

ಇ) ೧ ಚಿನ್ಮಯ ವಿದ್ಯಾಲಯ

೨ ಶ್ರೀ ದೇವರಾಜ್ ಅರಸ್ ಫೌಂಡೇಷನ್

೩ ಪೇರೆಂಟ್ಸ್ ಟೀಚರ್ಸ್ ಎಜುಕೇಷನ್ ಸೊಸೈಟಿ

೪ ದೀಪ್ತಿ ಸೋಶಿಯಲ್ ಅಂಡ್ ಎಜುಕೇಷನ್ ಸೊಸೈಟಿ

೫ ದಿ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್.

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ಇಂಗ್ಲೀಷ್ ಮಾಧ್ಯಮ ಪ್ರೌಢ ಶಾಲೆಗಳನ್ನು ಕೇಳಿ ಎಷ್ಟು ಅರ್ಜಿಗಳು ಬಂದಿವೆ? ಅವುಗಳಲ್ಲಿ ಪುರಸ್ಕಾರ ಹಾಗೂ ತಿರಸ್ಕಾರವಾದ ಅರ್ಜಿಗಳೆಷ್ಟು? ಕೆಲವಕ್ಕೆ ಅನುಮತಿ ಕೊಟ್ಟು ಕೆಲವಕ್ಕೆ ನಿರಾಕರಣೆ ಮಾಡಿದ್ದಾದರು ಸರ್ಕಾರದ ದ್ವಂದ್ವ ನೀತಿಯಲ್ಲವೇ? "ಅವಶ್ಯಕತಾನುಸಾರ ಮತ್ತು ನಿಯಮಾನುಸಾರ ಅನುಮತಿ ನೀಡಲಾಗಿದೆ" ಎಂಬುದನ್ನು ಸ್ವಲ್ಪ ಬಿಡಿಸಿ ಹೇಳಬೇಕು.

ಶ್ರೀ ಡಿ. ಮಂಜುನಾಥ್.—ಎಷ್ಟು ಅರ್ಜಿಗಳು ಬಂದಿವೆ ಎನ್ನುವ ಬಗ್ಗೆ ಮಾಹಿತಿ ಇಲ್ಲ ಕೆಲವರಿಗೆ ಅನುಮತಿ ಕೊಟ್ಟಿದ್ದು ಕೆಲವು ಅರ್ಜಿಗಳು ಪೆಂಡಿಂಗ್ ಇವೆ. ಒಂದು ನಿಯಮ ಏನೆಂದರೆ, ಈಗಾಗಲೇ ನಾವು ಹೇಳಿರುವ ಪ್ರಕಾರ ಒಂದರಿಂದ ಏಳನೇ ತರಗತಿಗಳವರೆಗೆ ನಡೆಸಿರಬೇಕು, ಜೊತೆಗೆ ವಿಸಲಾತಿ ಪ್ರಕಾರವೇ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು, ಜೊತೆಗೆ ಅವರಿಗೆ ಅನುದಾನವನ್ನು